## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹಿರಿಯ/ ಉಪ ನೋಂದಣಾಧಿಕಾರಿಗಳ ವಿರುದ್ಧ ದಾಖಲಾಗುವ ದೂರುಗಳ ನಿರ್ವಹಣೆಗಾಗಿ ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ (Specific and Independent Grievance Redressal System)ವನ್ನು ಸ್ಥಾಪನೆ ಮಾಡುವ ಕುರಿತು-ಆದೇಶ.

**ಓದಲಾಗಿದೆ:** ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: Comp/94/2019-20.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರದಲ್ಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಉಪ ನೋಂದಣಾಧಿಕಾರಿಗಳ ವಿರುದ್ಧ ದಾಖಲಾಗುವ ದೂರುಗಳ ನಿರ್ವಹಣೆಗಾಗಿ ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರವನ್ನು (Specific and Independent Grievance Redressal System) ಸ್ಥಾಪನೆ ಮಾಡುವ ಅವಶ್ಯಕತೆ ಇರುವುದರಿಂದ, ದಿನಾಂಕ:27-05-2020ರಂದು ನಡೆದ ಸಭೆಯಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರವನ್ನು ಸಂಬಂಧಪಟ್ಟ ಪ್ರಾದೇಶಿಕ ವಿಭಾಗದ ಮುಖ್ಯಸ್ಥರಾದ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲು, ಆದೇಶಿಸಿರುವುದಾಗಿ ತಿಳಿಸುತ್ತಾ, ಸ್ವತಂತ್ರ ಕುಂದು ಕೊರತೆ ಪರಿಹಾರದ ರೂಪು ರೇಷೆಗಳನ್ನು ಕೆಳಕಂಡಂತೆ ರಚಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**ಕುಂದು ಕೊರತೆ ಪರಿಹಾರ ಕಾರ್ಯ ವಿಧಾನ:**

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿಗಳ ವಿರುದ್ಧ ದಾಖಲಾಗುವ ದೂರುಗಳ ನಿರ್ವಹಣೆಗಾಗಿ ಕೆಳಕಂಡಂತೆ ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ ಸ್ಥಾಪನೆ ಮಾಡಬಹುದಾಗಿದೆ.

Comp 20/11/2020

| ಪರಿಹಾರ ಹಂತ | ಅಧಿಕಾರಿಯ ಹುದ್ದೆ | ನಿಗದಿತ ಸಮಯ |
|---|---|---|
| ಹಂತ-1 | ಉಪ ನೋಂದಣಾಧಿಕಾರಿ | 7 ಕೆಲಸದ ದಿನಗಳು |
| ಹಂತ-2 | ಜಿಲ್ಲಾ ನೋಂದಣಾಧಿಕಾರಿಗಳು | 10 ಕೆಲಸದ ದಿನಗಳು |
| ಹಂತ-3 (Specific and Independent Grievance Redressal System) (ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ) | ಪ್ರಾದೇಶಿಕ ಆಯುಕ್ತರು | 15 ಕೆಲಸದ ದಿನಗಳು |

**ಹಂತ-1**

ಯಾವುದೇ ನಾಗರೀಕರಿಂದ ಸ್ವೀಕರಿಸಿದ ದೂರುಗಳಿಗೆ ಉಪ ನೋಂದಣಾಧಿಕಾರಿಗಳು 07 ಕೆಲಸದ ದಿನಗಳ ಒಳಗೆ ಇತ್ಯರ್ಥಗೊಳಿಸಬೇಕು. ಒಂದು ವೇಳೆ ಉಪ ನೋಂದಣಾಧಿಕಾರಿಗಳು ಇತ್ಯರ್ಥಗೊಳಿಸದೇ ಇದ್ದಲ್ಲಿ ಅಂತಹ ದೂರುಗಳು ಜಿಲ್ಲಾ ನೋಂದಣಾಧಿಕಾರಿಗಳಿಗೆ (2ನೇ ಹಂತದ ಪರಿಹಾರ ಅಧಿಕಾರಿ) ಸ್ವತಂತ್ರ ಕುಂದು ಕೊರತೆ ಪರಿಹಾರ ಕಾರ್ಯವಿಧಾನ ಪದ್ಧತಿಯನ್ನು ನೇರವಾಗಿ ತಲುಪುತ್ತದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-560009.
ಸ್ವೀಕೃತಿ ಸಂಖ್ಯೆ: 1042
ದಿನಾಂಕ: 20/11/2020

**ಹಂತ-2**

2ನೇ ಹಂತದ ಅಧಿಕಾರಿಗಳಾದ ಜಿಲ್ಲಾ ನೋಂದಣಾಧಿಕಾರಿಗಳು ದೂರು ತಲುಪಿದ 10 ಕೆಲಸದ ದಿನಗಳ ಒಳಗೆ ಇತ್ಯರ್ಥಗೊಳಿಸಬೇಕು.

**ಹಂತ-3**

ಪ್ರಾದೇಶಿಕ ಆಯುಕ್ತರನ್ನು ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ ಎಂದು ನೇಮಿಸಬಹುದಾಗಿರುತ್ತದೆ.

ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರವು ಕೆಳಕಂಡಂತೆ ದೂರುಗಳನ್ನು ನಿರ್ವಹಣೆ ಮಾಡುತ್ತದೆ.

**ಪ್ರಕರಣ-1**

ಪ್ರಕರಣಕ್ಕೆ ಸಂಬಂಧಿಸಿದಂತೆ, ಪರಿಹಾರ ಸಿಗದಿದ್ದ ಪಕ್ಷದಲ್ಲಿ ದೂರು ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರಕ್ಕೆ ತನ್ನಿಂತಾನೆ ವರ್ಗಾವಣೆ ಆಗುವುದಿಲ್ಲ. ಸಾರ್ವಜನಿಕರು ತಮ್ಮ ದೂರನ್ನು ಇಲಾಖೆಯಿಂದ ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ ಎಂದು ನೇಮಿಸಲ್ಪಟ್ಟ ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

**ಪ್ರಕರಣ-2**

ಒಂದು ವೇಳೆ ಕೆಳ ಹಂತದಲ್ಲಿ ಪ್ರಕರಣ ಇತ್ಯರ್ಥವಾಗಿದ್ದು, ಅರ್ಜಿದಾರರಿಗೆ ಅದು ತೃಪ್ತಿಕರವಾಗಿರದ ಸಂದರ್ಭದಲ್ಲಿ, ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರದ ಪ್ರಾದೇಶಿಕ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ.

ಮೇಲೆ ವಿವರಿಸಿರುವಂತೆ, ಉಪ ನೋಂದಣಾಧಿಕಾರಿಗಳ ವಿರುದ್ಧ ದಾಖಲಾಗುವ ದೂರುಗಳ ನಿರ್ವಹಣೆಗಾಗಿ ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ (Specific and Independent Grievance Redressal System) ಅನ್ನು ಸ್ಥಾಪನೆ ಮಾಡಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/58/ಎಂಎನ್‌ಎಂಯು/2020**
**ಬೆಂಗಳೂರು, ದಿನಾಂಕ: 11-11-2020**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ: 27-05-2020 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿಶ್ವಬ್ಯಾಂಕ್‌ನ Ease of Doing Business Reports 2021 ರಲ್ಲಿ ವ್ಯವಹಾರ ಸರಳೀಕರಣ (EODB)ಗೊಳಿಸುವ ಸುಧಾರಣಾ ಅಂಶಗಳ ಅನುಷ್ಠಾನದ ಬಗ್ಗೆ ಜರುಗಿದ ಸಭೆಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನೀಡಿರುವ ಸೂಚನೆಯ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ಸರಳೀಕರಣಗೊಳಿಸುವ ನಿಟ್ಟಿನಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಹಿರಿಯ ಉಪ ನೋಂದಣಾಧಿಕಾರಿ ಮತ್ತು ಉಪ ನೋಂದಣಾಧಿಕಾರಿಗಳ ವಿರುದ್ಧ ದಾಖಲಾಗುವ, ದೂರುಗಳ ನಿರ್ವಹಣೆಗಾಗಿ ಸಂಬಂಧಪಟ್ಟ

. . . 3

ಪ್ರಾದೇಶಿಕ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಿರ್ದಿಷ್ಟ ಮತ್ತು ಸ್ವತಂತ್ರ ಕುಂದು ಕೊರತೆ ನಿವಾರಣಾ ಪ್ರಾಧಿಕಾರ (Specific and Independent Grievance Redressal Authority)ವನ್ನು ಈ ಕೆಳಕಂಡಂತೆ ಸ್ಥಾಪನೆ ಮಾಡಿ ಆದೇಶಿಸಿದೆ.

| **ಪರಿಹಾರ ಹಂತ** | **ಅಧಿಕಾರಿಯ ಹುದ್ದೆ** | **ನಿಗದಿತ ಸಮಯ** |
|---|---|---|
| ಹಂತ-1 | ಹಿರಿಯ ಉಪ ನೋಂದಣಾಧಿಕಾರಿ / ಉಪ ನೋಂದಣಾಧಿಕಾರಿ | 7 ಕೆಲಸದ ದಿನಗಳು |
| ಹಂತ-2 | ಜಿಲ್ಲಾ ನೋಂದಣಾಧಿಕಾರಿಗಳು | 10 ಕೆಲಸದ ದಿನಗಳು |
| ಹಂತ-3 (Specific and Independent Grievance Redressal System) (ಸ್ವತಂತ್ರ ಕುಂದು ಕೊರತೆ ಪರಿಹಾರ ಪ್ರಾಧಿಕಾರ) | ಪ್ರಾದೇಶಿಕ ಆಯುಕ್ತರು | 15 ಕೆಲಸದ ದಿನಗಳು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಏಕೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ&ಇ), ಅಂಚೆ ಪೆಟ್ಟಿಗೆ ಸಂಖ್ಯೆ: 5329, ಪಾರ್ಕ್‌ಹೌಸ್ ರಸ್ತೆ, ಕರ್ನಾಟಕ, ಬೆಂಗಳೂರು-560 001.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು.
5. ಎಲ್ಲಾ ಹಿರಿಯ/ ಉಪ ನೋಂದಣಾಧಿಕಾರಿಗಳು.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ ಮತ್ತು ಯುಪಿಓಆರ್) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಕಂದಾಯ ಇಲಾಖೆ, (ವಿ.ನಿ., ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.